ಆಚಾರಧರ್ಮ ಪಾಲಿಸಲು ಕಲಿಸುವ ಗ್ರಂಥಮಾಲಿಕೆ : ವೇಷಭೂಷಣ - ಖಂಡ ೨

# ಸ್ತ್ರೀಯರಿಗೆ ಆಧ್ಯಾತ್ಮಿಕ ದೃಷ್ಟಿಯಿಂದ ಉಪಯುಕ್ತ ಉಡುಪುಗಳು

(Spiritually beneficial clothes for women) ಕನ್ನಡ (Kannada)


**ಸಂಕಲನಕಾರರು**

ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

('ಸಚ್ಚಿದಾನಂದ ಪರಬ್ರಹ್ಮ' ಬಿರುದಿನ ಸ್ಪಷ್ಟೀಕರಣವನ್ನು 'ಪುಟ ೭' ರಲ್ಲಿ ಓದಿ.)

**ಜ್ಞಾನ ಪಡೆದವರು**

ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ

ಸೌ. ರಂಜನಾ ಗೌತಮ ಗಡೇಕರ

ಪ್ರೊ. (ಸೌ.) ಯೋಯಾ ಸಿರಿಯಾಕ್ ವಾಲೆ ಮತ್ತು ಇತರರು





**ಸನಾತನ ಸಂಸ್ಥೆ**


**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು 'ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ'ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : 93424 35617
ಇತರ ದೂ.ಕ್ರ. (ಗೋವಾ) : (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ ಮತ್ತು ಚಿತ್ರಕಾರರು** : ಶ್ರೀ. ಗುರುದಾಸ ಸದಾನಂದ ಖಂಡೇಪಾರಕರ
ಸೌ. ಜಾಹ್ನವಿ ರಮೇಶ ಶಿಂದೆ
ಸೌ. ಆರತಿ ಭೂಷಣ ಪುರಾಣಿಕ

**First Edition** : Ramana Maharshi Punyatithi,
Kaliyug Varsh 5112 (11th April 2010)

**Third Edition** : Datta Jayanti, Kaliyug Varsh 5124
(7th December 2022)

Translated from the original Marathi text ‘Streesathi adhyatmikdrushtya upayukta asalele kapade’
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ ಮತ್ತು ಗುಜರಾತಿ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಡಾ. ಪ್ರಕಾಶ ಘಾಳಿ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 130/-

**ISBN :** 978-93-92952-11-1

ॐ ಗ್ರಂಥ ಕ್ರ. : 144

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೬

೨. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೯

೩. ಮನೋಗತ ೧೩

---

# ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)

೧. ಶರೀರದ ಮೇಲೆ ಸಾತ್ತ್ವಿಕ ಬಟ್ಟೆಗಳಿಲ್ಲದಾಗ ಮತ್ತು ಬಟ್ಟೆಗಳಿರುವಾಗ ವ್ಯಕ್ತಿಯಿಂದ ಆಕರ್ಷಿಸುವ ಕೆಟ್ಟ ಅಥವಾ ಒಳ್ಳೆಯ ಶಕ್ತಿಗಳ ಪ್ರಮಾಣ ೧೬

೨. ಸ್ತ್ರೀಯರ ಉಡುಪುಗಳ ವಿಧಗಳು ೧೬

* ಚುಡಿದಾರವನ್ನು ಧರಿಸುವುದರಿಂದಾಗುವ ಹಾನಿ ೧೮
* ಶರ್ಟ್-ಪ್ಯಾಂಟ್‌ನ್ನು ಧರಿಸಿದರೆ ಮಾಂತ್ರಿಕನಿಗೆ ಆಕ್ರಮಣ ಮಾಡಲು ಸುಲಭವಾಗುತ್ತದೆ ೨೧
* ಸ್ತ್ರೀಯರು ತೋಳಿಲ್ಲದ ಟಾಪ್ ಮತ್ತು ಪ್ಯಾಂಟ್ ಧರಿಸುವುದರಿಂದಾಗುವ ಸೂಕ್ಷ್ಮದಲ್ಲಿನ ಪರಿಣಾಮಗಳು ೨೨
* ಕಡಿಮೆ ಬಟ್ಟೆಗಳನ್ನು ಧರಿಸುವುದೆಂದರೆ ಕೆಟ್ಟ ಶಕ್ತಿಗಳಿಗೆ ಆಮಂತ್ರಣ ನೀಡುವುದು ! ೨೪
* ಕೆಟ್ಟ ಶಕ್ತಿಗಳ ತೊಂದರೆಯಿರುವವರಿಗೆ ವಿದೇಶೀ ಪರಂಪರೆಯ ಉಡುಪುಗಳು ಇಷ್ಟವಾಗುತ್ತವೆ ೨೮
* ಸೀರೆಯಿಂದ ದೇವತೆಯ ತತ್ತ್ವದ ಅನುಭೂತಿಯು ಬರುವುದು ೩೩
* ಹದಿನೆಂಟು ಮೊಳದ ಸೀರೆಯ ಸೆರಗಿನ ತುದಿಗಳಿಂದ ಸ್ತ್ರೀಯರ ರಕ್ಷಣೆಯಾಗುತ್ತದೆ ೪೨
* ಪ್ರಸಾದವೆಂದು ದೊರಕಿರುವ ಸೀರೆಯನ್ನು ಉಟ್ಟುಕೊಳ್ಳುವುದರಿಂದಾಗುವ ಲಾಭಗಳು ಮತ್ತು ಅದರ ಬಗೆಗಿನ ಅನುಭೂತಿಗಳು ೬೫
* ಉನ್ನತ ಸಾಧಕಿಯ ಚೈತನ್ಯದ ಪರಿಣಾಮವಾಗಿರುವ ಸೀರೆಯನ್ನು ಉಟ್ಟುಕೊಂಡಾಗ ಬಂದಿರುವ ಅನುಭೂತಿ ೭೩

೨ ಇ. ಸ್ತ್ರೀಯರ ವಿವಿಧ ಉಡುಪುಗಳ ತುಲನೆ ೭೫

೨ ಈ. ಸ್ತ್ರೀಯರು ಶರೀರದ ಮೇಲಿನ ಭಾಗದಲ್ಲಿ ಧರಿಸುವ ಉಡುಪುಗಳ ಪ್ರಕಾರ ಮತ್ತು ಬಣ್ಣಗಳಿಗನುಸಾರ ಅವುಗಳಿಂದ ಸಿಗುವ ಸಾತ್ತ್ವಿಕತೆ ೯೩

೨ ಉ. ಸ್ತ್ರೀಯರ ಉಡುಪುಗಳ ವಿಧಗಳು ಮತ್ತು ಅವುಗಳಿಂದ ಸಿಗುವ ಕೆಟ್ಟ ಅಥವಾ ಒಳ್ಳೆಯ ಶಕ್ತಿಗಳ ಪ್ರಮಾಣ ೯೭

೨ ಊ. ಸ್ತ್ರೀಯರ ಉಡುಪುಗಳ ವಿಧಗಳು ಮತ್ತು ಅವು ಕೆಟ್ಟ ಶಕ್ತಿ ಮತ್ತು ಒಳ್ಳೆಯ ಶಕ್ತಿಯಿಂದ ತುಂಬಿಕೊಳ್ಳುವುದರ ಪ್ರಮಾಣ ೯೮

**೩. ಚಿಕ್ಕ ಮಗುವಿನ ಬಟ್ಟೆಗಳು ೯೯**

**೪. ಹಿಂದೂಗಳೇ, ಅಧರ್ಮಾಚರಣೆಯನ್ನು ಮಾಡಬೇಡಿರಿ ಮತ್ತು ಅಧರ್ಮಾಚರಣೆಯಾಗುತ್ತಿದ್ದರೆ ತಡೆಗಟ್ಟಿರಿ ! ೧೦೦**

**೫. ಸಾತ್ತ್ವಿಕ ವೇಷಭೂಷಣಗಳೊಂದಿಗೆ ಆಚಾರ-ವಿಚಾರಗಳೂ ಸಾತ್ತ್ವಿಕವಾಗಿರುವುದು ಆವಶ್ಯಕ ೧೦೧**

**೬. ಭಾವವಿರುವವರು, ಒಳ್ಳೆಯ ಆಧ್ಯಾತ್ಮಿಕ ಮಟ್ಟವಿರುವವರು, ಸಂತರು ಮತ್ತು ಗುರುಕೃಪಾಯೋಗಾನುಸಾರ ಸಾಧನೆ ಮಾಡುವವರು ಬಾಹ್ಯ ವೇಷಭೂಷಣಗಳಿಗೆ ಮಹತ್ವ ಕೊಡುವ ಆವಶ್ಯಕತೆಯಿಲ್ಲ ೧೦೨**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೧೦೪**

**ನವೆಂಬರ್ ೨೦೨೨ ರವರೆಗೆ ಸನಾತನದ ೩೫೯ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೧,೭೮,೦೦೦ ಪ್ರತಿಗಳು !**

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗದರ್ಶನ ಮಾಡುತ್ತಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಅಂಜಲಿ ಗಾಡಗೀಳ ಇವರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಇವರ ಹೆಸರಿನ ಸಂಬೋಧನೆಯ ಬಗ್ಗೆ ಪರಾತ್ಪರ ಗುರು ಡಾ. ಆಠವಲೆಯವರು "ಶ್ರೀಚಿತ್‌ಶಕ್ತಿ'ಯು ಭಗವಂತನ ವೈಶ್ವಿಕ ಜ್ಞಾನಕ್ಕೆ ಸಂಬಂಧಿಸಿದೆ" ಎಂದು ಹೇಳಿದರು.

## ವಿಷಯಸೂಚಿಯಲ್ಲಿನ ಕ್ರಮಾಂಕ ೩

### ಮನೋಗತ

ಜೀನ್ಸ್, ಟೀ-ಶರ್ಟ್, ಚೂಡಿದಾರ, ಪಂಜಾಬಿ ಉಡುಪಿನಂತಹ ವಿದೇಶೀ ಪರಂಪರೆಯ ವೇಷಭೂಷಣಗಳು ಈಗ ಹಿಂದೂ ಸ್ತ್ರೀಯರ ಜೀವನಶೈಲಿಯ ಅವಿಭಾಜ್ಯ ಅಂಗವಾಗಿವೆ. ಇದಕ್ಕೆ ವಿರುದ್ಧವಾಗಿ ಹಿಂದೂ ಸಂಸ್ಕೃತಿಯನ್ನು ಪರಿಚಯಿಸುವ ಪಾರಂಪಾರಿಕ ಹದಿನೆಂಟು ಮೊಳದ ಸೀರೆಯ ಅಸ್ತಿತ್ವವು ಈಗ ಗ್ರಾಮೀಣ ಪ್ರದೇಶ ಗಳಿಗಷ್ಟೇ (ಹಳ್ಳಿಗಳಿಗೆ) ಸೀಮಿತವಾಗಿದೆ. ವ್ಯಕ್ತಿಯ ವೇಷಭೂಷಣಗಳ ಪರಿಣಾಮವು ಅವನಿಗೆ ಅರಿವಿಲ್ಲದೇ ಅವನ ಮನಸ್ಸಿನ ಮೇಲೆ ಆಗುತ್ತಿರುತ್ತದೆ. ಚೂಡಿದಾರ, ಜೀನ್ಸ್‌ನಂತಹ ಈಗ ಪ್ರಚಲಿತವಿರುವ ರಾಜಸಿಕ-ತಾಮಸಿಕ ವೇಷಭೂಷಣಗಳಿಂದ ಸ್ತ್ರೀಯರ ವೃತ್ತಿಯು ಚಂಚಲ ಮತ್ತು ಭೋಗವಾದಿಯಾಗುತ್ತದೆ ಮತ್ತು ಆರು ಗಜದ ಮತ್ತು ಒಂಬತ್ತು ಗಜದ ಸಾತ್ತ್ವಿಕ ಸೀರೆಗಳಿಂದ ಸ್ತ್ರೀಯರ ವೃತ್ತಿಯು ನಮ್ರ ಮತ್ತು ಧರ್ಮಾಚರಣಿಯಾಗುತ್ತದೆ. ಧರ್ಮಾಚರಣೆಯಿಂದ ಈಶ್ವರನ ಬಗ್ಗೆ ಭಕ್ತಿಭಾವವು ನಿರ್ಮಾಣವಾಗಿ ಈಶ್ವರಪಾಪ್ತಿಯೆಡೆಗೆ ಅವರ ಮಾರ್ಗಕ್ರಮಣವು ಪ್ರಾರಂಭವಾಗುತ್ತದೆ.

ರಾಜಸಿಕ-ತಾಮಸಿಕ ವೇಷಭೂಷಣಗಳ ಇನ್ನೊಂದು ಕೊರತೆಯೇನೆಂದರೆ ಆ ವೇಷ ಭೂಷಣಗಳಿಂದ ವ್ಯಕ್ತಿಗೆ ಕೆಟ್ಟ ಶಕ್ತಿಗಳ ತೊಂದರೆಯಾಗುವ ಸಾಧ್ಯತೆಯು ಹೆಚ್ಚಾಗುತ್ತದೆ. ಇದಕ್ಕೆ ವಿರುದ್ಧವಾಗಿ ಸಾತ್ತ್ವಿಕ ವೇಷಭೂಷಣ ಕೆಟ್ಟ ಶಕ್ತಿಗಳೊಂದಿಗಿನ ಯುದ್ಧದಲ್ಲಿನ ಒಂದು ಅಮೋಘ ಶಸ್ತ್ರವೇ ಆಗಿರುತ್ತವೆ. ವಿದೇಶೀ ಪದ್ಧತಿಯಿಂದ (ಸಂಸ್ಕೃತಿಯಿಂದ) ಬಂದಿರುವ ವೇಷಭೂಷಣಗಳು ಅಯೋಗ್ಯವಾಗಿದ್ದು ಹಿಂದೂ ಸಂಸ್ಕೃತಿಯಿಂದ ಬಂದಿರುವ ವೇಷಭೂಷಣಗಳು ಹೇಗೆ ಯೋಗ್ಯವಾಗಿವೆ ಎಂಬ ವಿಷಯದಲ್ಲಿನ ಅಧ್ಯಾತ್ಮಶಾಸ್ತ್ರೀಯ ಕಾರಣಮೀಮಾಂಸೆಯನ್ನು ಪ್ರಸ್ತುತ ಗ್ರಂಥದಲ್ಲಿ ಸ್ಪಷ್ಟೀಕರಿಸಲಾಗಿದೆ.

ಅಧ್ಯಾತ್ಮವು ಸೂಕ್ಷ್ಮದಲ್ಲಿನ ವಿಷಯಗಳನ್ನು ಅರಿತುಕೊಳ್ಳುವಂತಹ, ಅಂದರೆ ಅನುಭೂತಿಯ ಶಾಸ್ತ್ರವಾಗಿದೆ. ಇದಕ್ಕಾಗಿ ವಿವಿಧ ವೇಷಭೂಷಣಗಳನ್ನು ಧರಿಸಿದಾಗ ಸೂಕ್ಷ್ಮದಿಂದ ನಿರ್ದಿಷ್ಟವಾಗಿ ಏನು ಪರಿಣಾಮವಾಗುತ್ತದೆ ಎಂದು ಸಾಧಕಿಯರು ಮಾಡಿದ ಸೂಕ್ಷ್ಮದಲ್ಲಿನ ಪ್ರಯೋಗಗಳನ್ನು ಹಾಗೂ ವೇಷಭೂಷಣಗಳ ಕುರಿತಾದ ಸೂಕ್ಷ್ಮಜ್ಞಾನದ ಚಿತ್ರಗಳನ್ನು ಮತ್ತು ಸಾಧಕರ ಅನುಭೂತಿಗಳನ್ನೂ ಈ ಗ್ರಂಥದಲ್ಲಿ ಸೇರಿಸಲಾಗಿದೆ.

ಜೀವನದಲ್ಲಿನ ಪ್ರತಿಯೊಂದು ವಿಷಯವನ್ನು ಸಾತ್ತ್ವಿಕವನ್ನಾಗಿಸಲು ಪ್ರಯತ್ನಿಸುವುದೆಂದರೆ, ಜೀವನದ ಅಧ್ಯಾತ್ಮೀಕರಣ ಮಾಡುವುದು. ಸೀರೆಯಂತಹ ಸಾತ್ತ್ವಿಕ

ಉಡುಪುಗಳನ್ನು ಧರಿಸುವುದು ಜೀವನವನ್ನು ಅಧ್ಯಾತ್ಮೀಕರಣಗೊಳಿಸುವ ಒಂದು ಭಾಗವಾಗಿದೆ. ಅದರಂತೆಯೇ ಸ್ತ್ರೀಯರು ವಿದೇಶೀ ಪದ್ಧತಿಯ ಉಡುಪುಗಳನ್ನು ಧರಿಸಿದರೆ ಮುಂದಿನ ಪೀಳಿಗೆಯ ಮೇಲೆ ತಪ್ಪು ಸಂಸ್ಕಾರಗಳಾಗಬಹುದು. ಸುಸಂಸ್ಕೃತ ಮತ್ತು ಆದರ್ಶ ಪೀಳಿಗೆಯನ್ನು ನಿರ್ಮಿಸುವ ಜವಾಬ್ದಾರಿಯು ಈಗ ಈ ಪೀಳಿಗೆಯ ಸ್ತ್ರೀಯರ ಮೇಲಿದೆ.

ರಜ-ತಮದ ಪ್ರಾಬಲ್ಯವಿರುವ ಕಲಿಯುಗದಲ್ಲಿ ಸಾತ್ತ್ವಿಕ ವೇಷಭೂಷಣಗಳ ಜೊತೆಗೆ ಸಾಧನೆಯನ್ನು ಮಾಡಿದರೆ ಮಾತ್ರ ರಜ-ತಮಗಳಿಂದ ಎಲ್ಲ ರೀತಿಯಿಂದ ರಕ್ಷಣೆಯಾಗಿ ಆನಂದವು ಸಿಗಬಹುದು. ಇಂತಹ ಸದ್ಬುದ್ಧಿಯು ಎಲ್ಲರಿಗೂ ಸಿಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

## ಸೂಕ್ಷ್ಮಜ್ಞಾನದ ಚಿತ್ರಗಳ ಸ್ವರೂಪದಲ್ಲಿ ದೊರಕಿದ ಜ್ಞಾನ ಮತ್ತು ಶಬ್ದಜನ್ಯ ಸೂಕ್ಷ್ಮಜ್ಞಾನದಲ್ಲಿನ ಸಾಮ್ಯತೆಯು ಜ್ಞಾನದ ಹಿಂದೆ ಒಂದು ಶಾಸ್ತ್ರವಿದೆ ಎಂಬುದಕ್ಕೆ ಪುಷ್ಟಿ ಕೊಡುತ್ತದೆ !

‘ಸ್ಪಿರಿಚ್ಯುವಲ್ ಸೈನ್ಸ್ ರಿಸರ್ಚ್ ಫೌಂಡೇಶನ್ (ಎಸ್.ಎಸ್.ಆರ್.ಎಫ್.)’ ನ ಸಾಧಕಿ ಪೂ. (ಸೌ.) ಯೋಯಾ ವಾಲೆಯವರಿಗೆ ಸೂಕ್ಷ್ಮ-ದರ್ಶನೇಂದ್ರಿಯದಿಂದ ಯಾವುದಾದರೊಂದು ವಿಷಯದ ಬಗ್ಗೆ ಸೂಕ್ಷ್ಮದಲ್ಲಿ ಚಿತ್ರಗಳ ರೂಪದಲ್ಲಿ ಜ್ಞಾನವು ಸಿಗುತ್ತದೆ ಮತ್ತು ಸನಾತನದ ಕೆಲವು ಸಾಧಕರಿಗೆ ವಿಶ್ವಮನಸ್ಸು ಮತ್ತು ವಿಶ್ವಬುದ್ಧಿಯಿಂದ ಸೂಕ್ಷ್ಮದಲ್ಲಿ ಶಬ್ದಗಳ ರೂಪದಲ್ಲಿ ಜ್ಞಾನ ಸಿಗುತ್ತದೆ. ಪ್ರಸ್ತುತ ಗ್ರಂಥದಲ್ಲಿ ಪೂ. (ಸೌ.) ಯೋಯಾ ವಾಲೆಯವರು ಉಡುಪುಗಳ ಸಂದರ್ಭದಲ್ಲಿ ಬಿಡಿಸಿದ ಸೂಕ್ಷ್ಮಜ್ಞಾನದ ಚಿತ್ರಗಳನ್ನು ಮತ್ತು ಅವುಗಳ ಬಗ್ಗೆ ಅರಿವಾದ ಅಂಶಗಳನ್ನು ಕೊಡಲಾಗಿದೆ, ಇದರೊಂದಿಗೆ ಗ್ರಂಥದಲ್ಲಿ ಜ್ಞಾನಪಡೆದುಕೊಳ್ಳುವ ಸಾಧಕರಿಗೆ ಉಡುಪುಗಳ ಸಂದರ್ಭದಲ್ಲಿ ಪ್ರಾಪ್ತವಾದ ಶಾಸ್ತ್ರೀಯ ಮಾಹಿತಿಯನ್ನೂ ಕೊಡಲಾಗಿದೆ. ಪೂ. (ಸೌ.) ಯೋಯಾ ವಾಲೆ ಮತ್ತು ಜ್ಞಾನಪಡೆದುಕೊಳ್ಳುವ ಸಾಧಕರಿಗೆ ದೊರಕಿರುವ ಜ್ಞಾನದಲ್ಲಿ ಸಾಮ್ಯತೆಯಿದೆ. ‘ಒಂದು ವಿಷಯವು ಪುನಃಪುನಃ ಸಿದ್ಧವಾಯಿತೆಂದರೆ ಅದರ ಹಿಂದೆ ಶಾಸ್ತ್ರವಿರುತ್ತದೆ. ಅದಕ್ಕನುಸಾರ ಉಡುಪುಗಳ ಸಂದರ್ಭದಲ್ಲಿ ದೊರಕಿದ ಮಾಹಿತಿಯ ಹಿಂದೆ ನಿಶ್ಚಿತವಾಗಿಯೂ ಶಾಸ್ತ್ರವಿದೆ ಎಂಬುದಕ್ಕೆ ಪುಷ್ಟಿಯು ಸಿಗುತ್ತದೆ. ಸಾಧಕರಿಗೆ ಉಡುಪುಗಳ ಸಂದರ್ಭದಲ್ಲಿ ಬಂದಿರುವ ಅನುಭೂತಿಗಳಿಂದ ಈ ಶಾಸ್ತ್ರವು ಪ್ರಮಾಣಸಹಿತ ಸಿದ್ಧವಾಗುತ್ತದೆ.